

ಬೀದರ್‌ನ ಜಿಲ್ಲಾ ನೆಹರೂ ಕ್ರೀಡಾಂಗಣದಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ತಮ್ಮ ಕೌಶಲ ಪ್ರದರ್ಶಿಸಿದ 'ಅಕ್ಕ ಪಡೆ' ಸಿಬ್ಬಂದಿ



'ಅಕ್ಕ ಪಡೆ'ಯ ಸಿಬ್ಬಂದಿ 300 ಕಿ.ಮೀ. ಬೈಕ್ ರ್‍ಯಾಲಿ ನಡೆಸಿ ಸಂಭ್ರಮಿಸಿದ ಕ್ಷಣ

ಕುರಿತು ಜಾಗೃತಿ ಕಾರ್ಯ ಆರಂಭಿಸಿದರು. ಶಾಲಾ–ಕಾಲೇಜುಗಳು, ಉದ್ಯಾನಗಳು, ಗ್ರಂಥಾಲಯಗಳು, ಹಾಸ್ಟೆಲ್‌ಗಳು ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಗಸ್ತು ಕೂಡ ಹೆಚ್ಚಿಸಿದರು. ಇದರ ಪರಿಣಾಮ ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯದ ಪ್ರಕರಣಗಳು ಕಡಿಮೆಯಾದವು. ಮಕ್ಕಳ ಸಹಾಯವಾಣಿಗೆ ಕರೆ ಮಾಡಿ, ಕಾನೂನಿನ ನೆರವು ಕೇಳುವವರ ಸಂಖ್ಯೆ ಹೆಚ್ಚಾಯಿತು. ನಶೆ ವಸ್ತು ಪೂರೈಸುವವರ ಜಾಲ ಕತ್ತರಿಸಲು ಸಹಾಯಕವಾಯಿತು.

ಈ ವಿಷಯವನ್ನು ಅರಿತೇ ರಾಜ್ಯ ಸರ್ಕಾರ ರಾಜ್ಯದಾದ್ಯಂತ 'ಅಕ್ಕ ಪಡೆ' ವಿಸ್ತರಿಸಲು ನಿರ್ಣಯಿಸಿದೆ. 'ಅಕ್ಕ ಪಡೆ' ಬೀದರ್ ಜಿಲ್ಲೆಯಲ್ಲಿ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಬೀದರ್ ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರನ್ನು ಅಭಿನಂದಿಸಿದರು. ಇದನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಆನಂತರ ಸರ್ಕಾರ ಈ ಬಗ್ಗೆ ತೀರ್ಮಾನ ಸಹ ಕೈಗೊಂಡಿತು.



## ಚಿಗುರೊಡೆದದ್ದು ಹೇಗೆ?

ಸದ್ಯ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿರುವ ಚನ್ನಬಸವಣ್ಣ ಎಸ್.ಎಲ್. ಅವರು 2023ರಲ್ಲಿ ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕಗೊಂಡಿದ್ದರು. ಇದಕ್ಕೂ ಮುನ್ನ ಅವರು ರಾಜ್ಯದ ಇತರೆ ಜಿಲ್ಲೆಗಳಲ್ಲೂ ಕೆಲಸ ಮಾಡಿದ್ದರು. ಜೊತೆಗೆ ದಕ್ಷಿಣ ಸುಡಾನ್‌ನಲ್ಲಿ ಆಂತರಿಕ ಸಂಘರ್ಷ ತಲೆದೋರಿದಾಗ ಅಲ್ಲಿಗೆ ವಿಶ್ವಸಂಸ್ಥೆಯ ಪೊಲೀಸ್ ಶಾಂತಿ ಪಡೆಯನ್ನು ಕಳಿಸಲಾಗಿತ್ತು. ಆ ಪಡೆಯಲ್ಲಿ ಭಾರತದಿಂದ ಚನ್ನಬಸವಣ್ಣ ಕೂಡ ಇದ್ದರು. ಅಲ್ಲಿ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಕೈಗೊಂಡ ಪರಿಣಾಮಕಾರಿ ಕ್ರಮಗಳಿಂದ ಪ್ರಭಾವಿತರಾಗಿ 'ಅಕ್ಕ ಪಡೆ' ಸ್ಥಾಪಿಸಿದರು.

'ಜನಾಂಗೀಯ ಕಲಹದಿಂದ ತತ್ತರಿಸಿ ಹೋಗಿದ್ದ ದಕ್ಷಿಣ ಸುಡಾನ್‌ನಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವುದರ ಜೊತೆಗೆ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಕಿರುಕುಳ ತಡೆಯುವುದು ದೊಡ್ಡ ಸವಾಲಾಗಿತ್ತು. ಜಾಂಬಿಯಾದ ಪೊಲೀಸ್ ಮುಖ್ಯಸ್ಥೆ ಡೋರಿನ್ ಮಲಾಂಬೊ ಅವರೊಂದಿಗೆ ಕೆಲಸ ನಿರ್ವಹಿಸಬೇಕಿತ್ತು. ಅವರು ಹೆಣ್ಣುಮಕ್ಕಳ ಮೇಲಿನ ಎಲ್ಲಾ ರೀತಿಯ ದೌರ್ಜನ್ಯ ತಡೆ, ಕಾನೂನಿನ ಅರಿವು ಮೂಡಿಸಿದ ಕ್ರಮಗಳಿಂದ ಬಹಳಷ್ಟು ಸುಧಾರಣೆ ಕಂಡಿತ್ತು. ಅದು ನನ್ನ ಮೇಲೆ ಸಾಕಷ್ಟು ದೊಡ್ಡ ಮಟ್ಟದ ಪರಿಣಾಮ ಬೀರಿತ್ತು. ಅದರ ಫಲವೇ 'ಅಕ್ಕ ಪಡೆ'. 12ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿಗೆ ಸಾಕ್ಷಿಯಾದ ಬೀದರ್ ಜಿಲ್ಲೆಯ ನೆಲದಲ್ಲಿ ಅಕ್ಕಮಹಾದೇವಿ ಪ್ರಭಾವ ದಟ್ಟವಾಗಿದೆ. ಆದಕಾರಣ ಮಹಿಳಾ ಪೊಲೀಸ್ ಪಡೆಗೆ 'ಅಕ್ಕ ಪಡೆ' ಎಂದು ನಾಮಕರಣ ಮಾಡಲಾಯಿತು' ಎಂದು ಚನ್ನಬಸವಣ್ಣ ಎಸ್.ಎಲ್. ತಿಳಿಸಿದ್ದಾರೆ.

'ಮಹಿಳಾ ಪೊಲೀಸರು ಬಹಳ ಸೀಮಿತವಾಗಿ ಕೆಲಸ ಮಾಡುತ್ತಿದ್ದರು. ಠಾಣೆಯ ಹೊರಗೆ ಕರ್ತವ್ಯ ನಿರ್ವಹಿಸುವುದು ಕಡಿಮೆ ಇತ್ತು. ಆಗಾಗ ಬಂದೋಬಸ್ತ್‌ಗೆ ನಿಯೋಜಿಸಲಾಗುತ್ತಿತ್ತು. ಹೆಚ್ಚಿನ ಜವಾಬ್ದಾರಿ ಇರಲಿಲ್ಲ. ಇವರಿಗೆಲ್ಲ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕೊಡಿಸಿ ಅವರನ್ನು ಹುರಿದುಂಬಿಸಿದೆ. ವಿಶ್ವಸಂಸ್ಥೆಯ ಅತ್ಯುತ್ತಮ ಮಹಿಳಾ ಪೊಲೀಸ್ ಅಧಿಕಾರಿ ಪ್ರಶಸ್ತಿಗೆ ಪಾತ್ರರಾದ ಜಾಂಬಿಯಾದ ಪೊಲೀಸ್ ಮುಖ್ಯಸ್ಥೆ ಡೋರಿನ್ ಮಲಾಂಬೊ ಅವರ ಭಾಷಣ ಕೇಳಿಸಿದೆ. 300 ಕಿ.ಮೀ. ಬೈಕ್ ರ್‍ಯಾಲಿ ಯಶಸ್ವಿಯಾಗಿ ಸಂಘಟಿಸಲಾಯಿತು. ಸ್ವತಃ ಅವರೇ ಶಾಲಾ–ಕಾಲೇಜುಗಳಿಗೆ ಹೋಗಿ ಉಪನ್ಯಾಸ ಕೊಡಲು ಆರಂಭಿಸಿದರು. ಇದರಿಂದ ದೊಡ್ಡ ಮಟ್ಟದ ಬದಲಾವಣೆಗೆ ಕಾರಣವಾಯಿತು. ರಾಜ್ಯ ಸರ್ಕಾರ 'ಅಕ್ಕ ಪಡೆ'ಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸುತ್ತಿರುವುದು ಸಂತಸದ ಸಂಗತಿ' ಎಂದು ಖುಷಿ ವ್ಯಕ್ತಪಡಿಸಿದ್ದಾರೆ.